# IN THE COURT OF THE ADDL. SENIOR CIVIL JUDGE & JMFC., GUBBI
# OS – 116/2023

Witness present and duly sworn on : 03.09.2025.

Further cross Examination: by Counsel for Defendant No.2 to 6 :

ನನ್ನ ತಂದೆ ಮೂಡಲಗಿರಿಯಪ್ಪನವರು 1995 ರಲ್ಲಿ ಮರಣ ಹೊಂದಿರುತ್ತಾರೆ. ಅದನ್ನು ತೋರಿಸಲು ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ದಾವಾ ಹಾಕುವ ಸಮಯದಲ್ಲಿ ದಾವಾ ಆಸ್ತಿಗಳು ಜಯಣ್ಣ ರವರ ಹೆಸರಿನಲ್ಲಿ ಇರುತ್ತದೆ. ಜಯಣ್ಣ ರವರ ಹೆಸರಿಗೆ ಬರುವ ಮೊದಲು ಸದರಿ ದಾಖಲೆಗಳು ನನ್ನ ತಂದೆ ಮೂಡಲಗಿರಿಯಪ್ಪನವರ ಹೆಸರಿನಲ್ಲಿ ಇದ್ದವು. ನನ್ನ ತಂದೆಯ ಹೆಸರಿನಲ್ಲಿ ಆಸ್ತಿಗಳು ಇದ್ದವು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಮರಣ ಶಾಸನವನ್ನು ಹಾಜರುಪಡಿಸಿದ್ದೇನೆ.

ದಾವಾ ಆಸ್ತಿಗಳನ್ನು ದಿನಾಂಕಃ 22.01.1983 ರಂದು ಮೂಡಲಗಿರಿಯಯ್ಯ ಬಿನ್ ? ಲೇಟ್ ತಿಮ್ಮಶೆಟ್ಟಪ್ಪ ಮತ್ತು ಮೂಡಲಗಿರಿಯಯ್ಯ ಬಿನ್ ಲೇಟ್ ತಿಮ್ಮಯ್ಯನವರು ಖರೀದಿ ಮಾಡಿದ್ದರು ಎಂದರೆ ನನ್ನ ತಂದೆ ಮೂಡಲಗಿರಿಯಪ್ಪ ರವರು ಖರೀದಿ ಮಾಡಿರುತ್ತಾರೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಮಾಡಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. 1995 ರಲ್ಲಿ ಮರಣ ಹೊಂದುವ ಸುಮಾರು 2 ವರ್ಷದ ಪೂರ್ವದಲ್ಲಿ ಅವರಿಗೆ ಗಂಟಲು ಕ್ಯಾನ್ಸರ್ ಆಗಿತ್ತು. ಆದ ಕಾರಣ ಅವರಿಗೆ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ- 15 ಮರಣ ಶಾಸನದ ಮೂಲ ದಾಖಲೆಯನ್ನು ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ಮೊದಲು ಹಾಕಿದ ದಾವೆಯಲ್ಲಿ ಸುಮಾರು 20 ವರ್ಷಗಳ ಹಿಂದೆ ಹಾಜರುಪಡಿಸಿದ್ದೇನೆ. ಸದರಿ ದಾವೆಯನ್ನು ಗಂಗಮ್ಮ ಎನ್ನುವವರು ಸಲ್ಲಿಸಿದ್ದರು. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಕ್ರಯದ ಕರಾರು ಪತ್ರವನ್ನು ರಾಜಣ್ಣ ಮತ್ತು ಮೋಹನ್ ಬಂಡಿ ರವರಿಗೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ ನಾನು ಸಹಿ

ಮಾಡಿದ್ದೇನೆ. ಸದರಿ ಕರಾರು ಪತ್ರ ಆಗುವಾಗ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ಕರಾರು ಪತ್ರದಂತೆ ಕ್ರಯಪತ್ರ ಮಾಡಿಕೊಡದೆ ಇದ್ದ ಕಾರಣ ಅವರುಗಳು ರುಕ್ಕಮ್ಮ ರವರ ವಿರುದ್ದ OS No.66/2010 ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ಡಿಕ್ರಿ ಆಗಲು ತಕರಾರು ಇಲ್ಲ ಎಂದು ರುಕ್ಕಮ್ಮ ರವರು ಲಿಖಿತ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳಲ್ಲಿ ಈಗ ಚೆಂಡು ಹೂ, ಸೇವಂತಿಗೆ ಮತ್ತು ರಾಗಿ ಬೆಳೆದಿದ್ದೇನೆ. ದಾವಾ ಆಸ್ತಿಗಳಲ್ಲಿ ಅಂತಹ ಬೆಳೆಗಳನ್ನು ನಾನು ಬೆಳೆದಿಲ್ಲ ಹಾಗೂ ಜಮೀನುಗಳು ಖಾಲಿ ಇವೆ ಎಂದರೆ ಸರಿಯಲ್ಲ. ಮೂಡಲಗಿರಿಯಯ್ಯ ಬಿನ್ ?ಲೇಟ್ ತಿಮ್ಮಶೆಟ್ಟಪ್ಪ ಮತ್ತು ಮೂಡಲಗಿರಿಯಯ್ಯ ಬಿನ್ ಲೇಟ್ ತಿಮ್ಮಯ್ಯನವರು ಖರೀದಿಯ ನಂತರ ಜಂಟಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೂಡಲಗಿರಿಯಯ್ಯ ಬಿನ್ ?ಲೇಟ್ ತಿಮ್ಮಶೆಟ್ಟಪ್ಪ ರವರ ಮರಣದ ನಂತರ ನನ್ನ ತಂದೆ ಮೂಡಲಗಿರಿಯಯ್ಯ ಬಿನ್ ಲೇಟ್ ತಿಮ್ಮಯ್ಯನವರು ಆಸ್ತಿಯ ಸ್ವಾಧೀನದಲ್ಲಿ ಇದ್ದರು. ಮೂಡಲಗಿರಿಯಯ್ಯ ಬಿನ್ ?ಲೇಟ್ ತಿಮ್ಮಶೆಟ್ಟಪ್ಪ ನವರ ಮರಣದ ನತಂರ ಮೂಡಲಗಿರಿಯಯ್ಯ ಬಿನ್ ಲೇಟ್ ತಿಮ್ಮಯ್ಯರವರ ಜೊತೆಯಲ್ಲಿ ಮೂಡಲಗಿರಿಯಯ್ಯ ಬಿನ್ ?ಲೇಟ್ ತಿಮ್ಮಶೆಟ್ಟಪ್ಪ ನವರ ಹೆಂಡತಿ ಗಂಗಮ್ಮ/6 ನೇ ಪ್ರತಿವಾದಿ ಜಂಟಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಮೂಡಲಗಿರಿಯಯ್ಯ ಬಿನ್ ? ಲೇಟ್ ತಿಮ್ಮಯ್ಯನವರು ದಿನಾಂಕಃ 07.02.1996 ರಂದು ಮರಣ ಹೊಂದಿದರು ಎಂದರೆ ಸರಿ. ಸದರಿ ಮೂಡಲಗಿರಿಯಯ್ಯ ಬಿನ್ ಲೇಟ್ ತಿಮ್ಮಯ್ಯನವರ ಮರಣದ ನಂತರ 6 ನೇ ಪ್ರತಿವಾದಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದು ಉಳುಮೆ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಅಂತಹ ಸಮಯದಲ್ಲಿ 1 ನೇ ಪ್ರತಿವಾದಿ ರುಕ್ಕಮ್ಮ ರವರು 6 ನೇ ಪ್ರತಿವಾದಿಯ ಸ್ವಾಧೀನಕ್ಕೆ ಅಡ್ಡಿ ಪಡಿಸಿದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರುಕ್ಕಮ್ಮ ನನ್ನ ತಾಯಿ. ನನ್ನ ತಾಯಿ 6 ನೇ ಪ್ರತಿವಾದಿಯ ಹಕ್ಕು ಸ್ವಾಧೀನಕ್ಕೆ ಧಕ್ಕೆ ಪಡಿಸಿದ ಕಾರಣ 6 ನೇ ಪ್ರತಿವಾದಿಯು ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ OS No.362/2014 ಹಕ್ಕು ಘೋಷಣೆ ಮತ್ತು ನಿರ್ಬಂದಕಾಜ್ಞೆ ದಾವೆ ಸಲ್ಲಿಸಿದರು ಎಂದರೆ ಮೋಸದಿಂದ ಸಲ್ಲಿಸಿರುತ್ತಾರೆ. ಸದರಿ ದಾವೆಯು ದಿನಾಂಕಃ 23.08.2018 ರಂದು 6 ನೇ ಪ್ರತಿವಾದಿಯೇ ಮಾಲೀಕರೆಂದು ಡಿಕ್ರಿ ಆಗಿದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯ ಆದ ನಂತರ 6 ನೇ ಪ್ರತಿವಾದಿಯ ಹೆಸರಿಗೆ ಕಂದಾಯ

ದಾಖಲೆಗಳು ಬದಲಾವಣೆ ಆದವು ಎಂದರೆ ಮೋಸದಿಂದ ಮಾಡಿಸಿಕೊಂಡಿರುತ್ತಾರೆ. ಸದರಿ ಡಿಕ್ರಿಯನ್ನು ಪ್ರಶ್ನಿಸಿ ನನ್ನ ತಾಯಿ RA No.33/2018 ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ದಿನಾಂಕಃ 24.02.2023 ರಂದು ವಜಾ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇನ್ನು ಚಾಲ್ತಿಯಲ್ಲಿ ಇರುತ್ತದೆ. OS No.362/2014 ಮತ್ತು RA No.33/2018 ನಡೆಯುವಾಗ ನಾನು ಮೂಡಲಗಿರಿಯಪ್ಪ ನವರ ಮಗಳು ಎಂದು ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸದರಿ ಪ್ರಕರಣಗಳನ್ನು ನನ್ನ ತಾಯಿ ನಡೆಸುತ್ತಿದ್ದರು ಮತ್ತು ನಾನು ಅರ್ಜಿ ಕೊಟ್ಟಿರುತ್ತೇನೆ.

(Further cross examination deferred at the request of counsel for the defendant No.2 to 6)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi